# ಫಾಕ್ಸ್ ಅಲ್ಲ, ಸಮಂತ

ಈಕೆ ಸಮಂತ. ಫಾಕ್ಸ್ ಅಲ್ಲ. ಬ್ರಿಟನ್ನಿನ ಮಾಡೆಲ್, ಗಾಯಕಿ ಸಮಂತ ಫಾಕ್ಸ್‌ಳನ್ನೂ ಸುದ್ದಿಯಲ್ಲಿ ಮೀರಿಸಬಲ್ಲ ಲೋಕಲ್ ಸಮಂತ ಈಕೆ. ತೆಲುಗು ಚಿತ್ರರಂಗದ ಸಿಂಹಿಣಿ ಈ ಸಮಂತ ರೂತ್ ಪ್ರಭು. ಚಿತ್ರರಂಗಕ್ಕೆ ಕಾಲಿಟ್ಟು ನಾಲ್ಕೇ ವರ್ಷಗಳಲ್ಲಿ ಅತ್ಯಧಿಕ ಸುದ್ದಿಗಳನ್ನು ಮಾಡಿದಾಕೆ. ಸೂಪರ್‌ಸ್ಟಾರ್‌ಗಳನ್ನು ಎದುರು ಹಾಕಿಕೊಂಡೂ ತನ್ನದೇ ಆದ ಸಾಮ್ರಾಜ್ಯ ನಿರ್ಮಿಸಿದಾಕೆ. ಚಿತ್ರರಂಗದ ಯಾವ ಹಿನ್ನೆಲೆ ಇಲ್ಲದೆ, ಸಾಮಾನ್ಯ ಕುಟುಂಬದಿಂದ ಬಂದ ಈಕೆ ತೆಲುಗು ಮತ್ತು ಚಿತ್ರರಂಗದ ಅತಿರಥ ಮಹಾರಥ ಹೀರೋಗಳ ಜತೆಗೆ ನಟಿಸಲು ನಿರಾಯಾಸವಾಗಿ ಅವಕಾಶಗಳನ್ನು ಪಡೆದಿದ್ದಾಳೆ. ಈಗಲೂ ಅವಕಾಶಗಳ ಲೆಕ್ಕದಲ್ಲಿ ಉಳಿದೆಲ್ಲ ನಟೀಮಣಿಯರನ್ನೂ ಹಿಂದಿಕ್ಕಿದ್ದಾಳೆ. 27ರ ಹರೆಯದ ಈಕೆಯ ಜತೆ ನಟಿಸಲು ತೆಲುಗು ಚಿತ್ರರಂಗದ ಸೂಪರ್‌ಸ್ಟಾರ್ ರಾಮ್‌ಚರಣ್ ಕಳೆದ ಮೂರು ವರ್ಷಗಳಿಂದಲೂ ಪ್ರಯತ್ನಿಸುತ್ತಿದ್ದಾನೆ, ಆದರೆ ಆತನ ಆಸೆ ಕೈಗೂಡುತ್ತಿಲ್ಲ ಎಂದರೆ ಈಕೆ ಎಷ್ಟು ಬ್ಯುಸಿ ಎನ್ನುವುದು ಗೊತ್ತಾಗುತ್ತದೆ.

ಇಂತಿರ್ಪ ಸಮಂತ ಈಗ ಥಟ್ಟನೆ ಟ್ವೀಟ್ ಮಾಡುವುದನ್ನು ನಿಲ್ಲಿಸಿದ್ದಾಳೆ. ಸದ್ಯಕ್ಕೆ ತಮಿಳು, ತೆಲುಗಿನ ಆರು ಸಿನಿಮಾಗಳಲ್ಲಿ ಸೂಪರ್‌ಸ್ಟಾರ್ ಹೀರೋಗಳ ಜತೆ ನಟಿಸುತ್ತಿರುವ ಈಕೆ, ಟ್ವಿಟ್ಟರ್ ಖಾತೆ ನಿಲ್ಲಿಸಿದ್ದರ ಬಗ್ಗೆ ನೂರೆಂಟು ಸುದ್ದಿಗಳು ಹರಿದಾಡುತ್ತಿವೆ. 'ಕೆಲಸದ ಒತ್ತಡದಿಂದ ಹುಷಾರಿಲ್ಲ, ವಿದೇಶಕ್ಕೆ ಚಿಕಿತ್ಸೆಗೆ ಹೋಗಿದ್ದಾಳೆ' ಎನ್ನುವುದರಿಂದ ಹಿಡಿದು, ಶೂಟಿಂಗ್‌ನಲ್ಲಿ ಬೆನ್ನು ಮೂಳೆ ಮುರಿದಿದೆ; ಬಾಯ್‌ಫ್ರೆಂಡ್ ಸಿದ್ಧಾರ್ಥ ಜತೆಗೆ ಸಂಬಂಧ ಮುರಿದುಬಿದ್ದಿದೆ.. ಎನ್ನುವಲ್ಲಿವರೆಗೆ ಹತ್ತಾರು ಸುದ್ದಿಗಳು ಹರಿದಾಡುತ್ತಿವೆ. ಈ ಬರಹ ಓದುವ ಹೊತ್ತಿಗೆ ಯಾವುದಾದರೊಂದು ಸುದ್ದಿ ಖಚಿತವಾಗಲೂಬಹುದು. ಅಥವಾ ಎಲ್ಲ ಸುದ್ದಿಗಳೂ ಸುಳ್ಳಾಗಬಹುದು.

2010ರಲ್ಲಿ 'ಏ ಮಾಯ ಚೇಸಾವು' ಎನ್ನುವ ಗೌತಮ್ ಮೆನನ್ ನಿರ್ದೇಶನದ ಚಿತ್ರದಲ್ಲಿ ಸಿಕ್ಕಿದ ಅವಕಾಶ ಈಕೆಯ ಭಾಗ್ಯದ ಬಾಗಿಲನ್ನು ತೆರೆಯಿತು ಎನ್ನಬಹುದು. ಅದಕ್ಕೂ ಮುನ್ನ ಒಂದು ಸಿನಿಮಾದಲ್ಲಿ ನಟಿಸಿದ್ದು ಲೆಕ್ಕಕ್ಕೇ ಬರಲಿಲ್ಲ. ಆದರೆ 'ಏ ಮಾಯ ಚೇಸಾವು' ಈಕೆಯ ನಟನೆ ಮತ್ತು ಸೌಂದರ್ಯ ಎರಡನ್ನೂ ಅದ್ಭುತವಾಗಿ ಪ್ರತಿಬಿಂಬಿಸಿತು. 'ದಕ್ಷಿಣದ ಅತ್ಯುತ್ತಮ ಹೊಸ ನಟಿ' ಎಂಬ ಫಿಲಂಫೇರ್ ಪ್ರಶಸ್ತಿಯೂ ಲಭಿಸಿತು. ವಿಮರ್ಶಕರೂ, ಸಾಮಾನ್ಯ ಪ್ರೇಕ್ಷಕರೂ ಏಕಕಾಲಕ್ಕೆ ಹೊಗಳಿದ ಚಿತ್ರವದು. ಅಲ್ಲಿಂದೀಚೆಗೆ ಈಕೆಗೆ ತೆಲುಗು– ತಮಿಳಿನಲ್ಲಿ ಕೈತುಂಬ ಕೆಲಸ. ತಮಿಳಿನ 'ನೀನ್ ದಾನೆ ಎನ್ ಪೊನ್‌ವಸಂತಂ' ಮತ್ತು ತೆಲುಗಿನ 'ಈಗ' ಚಿತ್ರಗಳ ನಟನೆಗೆ ಏಕಕಾಲದಲ್ಲಿ ಫಿಲಂಫೇರ್ ಪ್ರಶಸ್ತಿ ಲಭಿಸಿತು. ಈ ಹಿಂದೆ ಈ ರೀತಿಯ ಸಾಧನೆ ಮಾಡಿದ ನಟಿ ರೇವತಿಯ ದಾಖಲೆಯನ್ನೂ ಸಮಂತ ಮುರಿದಳು. ದೊಡ್ಡ ದೊಡ್ಡ ಆಫರ್‌ಗಳು ಹರಿದುಬಂದವು. ತಮಿಳಿನಲ್ಲಿ ವಿಜಯ್, ವಿಕ್ರಮ್, ಸೂರ್ಯ, ಧನುಶ್ ಮುಂತಾದ ಅತಿರಥರ ಜತೆಗೆ ನಟಿಸಿದರೆ, ತೆಲುಗಿನಲ್ಲಿ ಅಲ್ಲು ಅರ್ಜುನ್, ನಾಗಚೈತನ್ಯ, ಸಿದ್ಧಾರ್ಥ ಜತೆಯಾದರು. ಸಿದ್ಧಾರ್ಥನ ಜತೆಗೆ ಡೇಟಿಂಗ್ ಮಾಡುವುದನ್ನು ಬಿಡುಬೀಸಾಗಿ ಹೇಳಿಕೊಂಡ ಈಕೆಯ ಜತೆ ನಟಿಸಲು ತೆಲುಗಿನ ಬಹುತೇಕ ಸೂಪರ್‌ಸ್ಟಾರ್‌ಗಳು ಕ್ಯೂನಲ್ಲಿ ನಿಂತಿದ್ದಾರೆ. ಹೀಗಾಗಿಯೇ ಅಲ್ಲೀಗ ಈಕೆಯ ಸಂಭಾವನೆ ಒಂದು ಕೋಟಿ ರೂಪಾಯಿ ದಾಟಿದೆ.

ಮೂಲತಃ ಈಕೆ ಮಾಡೆಲಿಂಗ್ ಬೆಡಗಿ. ಚೆನ್ನೈಯ ಸ್ಟೆಲ್ಲ ಮೇರೀಸ್‌ನಲ್ಲಿ ಬಿಕಾಂ ಮಾಡುತ್ತಿರುವಾಗಲೇ ಪಾಕೆಟ್ ಮನಿಗಾಗಿ ರಾಂಪ್ ಏರಿದಾಕೆ. ಬಳಿಕ ಮಾಡೆಲಿಂಗೇ ವೃತ್ತಿಯಾಯಿತು. ಕೋಕಾಕೋಲ, ಚಿಕ್ ಶಾಂಪೂ, ಬಿಗ್ ಸಿ ಮೊಬೈಲ್, ಲಕ್ಸ್, ಪ್ಯಾರಾಗಾನ್, ಮಾರ್ಯೂ ಹೀಗೆ ಎಲ್ಲ ಕಂಪೆನಿಗಳಿಗೂ ಈಕೆಯೇ ಪ್ರಚಾರ ರಾಯಭಾರಿ. ಅಕ್ಕಿ, ಸಂಡಿಗೆ, ರೂಮ್ ಫ್ರೆಶ್ನರ್, ಡೈಮಂಡ್, ಸೀರೆ– ಹೀಗೆ ಈಕೆ ಮಾಡೆಲಿಂಗ್ ಮಾಡದ ಉತ್ಪನ್ನಗಳೇ ಇಲ್ಲ. ಸೀರೆಯೊಂದರ ಜಾಹೀರಾತಿಗೆ ಲಕ್ಷಗಟ್ಟಳೆ ಪಡೆದದ್ದಲ್ಲದೆ, ಅದೇ ಸೀರೆಯುಟ್ಟು ರಾಂಪ್ ಮೇಲೆ ಕೇವಲ 2 ನಿಮಿಷ ನಡೆದದ್ದಕ್ಕೆ ಈಕೆ 10 ಲಕ್ಷ ರೂಪಾಯಿ ಚಾರ್ಜ್ ಮಾಡಿದ್ದೂ ದೊಡ್ಡ ಸುದ್ದಿಯಾಯಿತು!

ಮಲಯಾಳಿ ತಾಯಿ, ತೆಲುಗು ತಂದೆಯ ಈ ಮಗಳು ಮನೆಯಲ್ಲಿ ಇಂಗ್ಲಿಷ್ ಮಾತನಾಡುತ್ತಾ ಚೆನ್ನೈನಲ್ಲಿ ಬೆಳೆದವಳು. ಹೀಗಾಗಿ ತಮಿಳೂ ಚೆನ್ನಾಗಿ ಗೊತ್ತು. 'ಏ ಮಾಯ ಚೇಸಾವು' ಚಿತ್ರದ ಜೆಸ್ಸಿ ಪಾತ್ರದ ಹೆಸರಿನಿಂದಲೇ ಈಕೆಯನ್ನೂ ಈಗಲೂ ಗುರುತಿಸುವವರಿದ್ದಾರೆ. 'ಪ್ರತ್ಯೂಶಾ ಸಪೋರ್ಟ್' ಎಂಬ ಚಾರಿಟಿ ಸಂಸ್ಥೆಯ ಮೂಲಕ ಅಬಲೆಯರು ಮತ್ತು ಮಕ್ಕಳ ಚಿಕಿತ್ಸೆಗಾಗಿ ನೆರವೀಯುವ ಈಕೆ, ಹಲವು ಎನ್‌ಜಿಒ ಗಳ ಜತೆಗೆ ನಿಕಟ ಬಾಂಧವ್ಯ ಹೊಂದಿದ್ದಾಳೆ. ಮನೆಯಲ್ಲಿ 'ಸ್ಯಾಮ್' ಆಗಿರುವ ಈ ಟ್ವಿಟ್ಟರ್ ಪ್ರಿಯೆ ತನ್ನ ಕಾಮೆಂಟುಗಳಿಂದಲೇ ಹಲವು ಸಲ ವಿವಾದಗಳನ್ನೂ ಸೃಷ್ಟಿಸಿಕೊಂಡದ್ದಿದೆ. ತೆಲುಗಿನ ಸೂಪರ್‌ಸ್ಟಾರ್ ಮಹೇಶ್‌ಬಾಬು ಅಭಿನಯದ ಚಿತ್ರವೊಂದರ ಪೋಸ್ಟರ್‌ನಲ್ಲಿ ಹೀರೋಯಿನ್ ಹೀರೊ ಹಿಂದೆ ತೆವಳಿಕೊಂಡು ಹೋಗುವ ಚಿತ್ರ ನೋಡಿ ಈಕೆ ಟೀಕಿಸಿದ ಪರಿಗೆ, ಮಹೇಶ್‌ಬಾಬು ಅಭಿಮಾನಿಗಳು ಸಿಟ್ಟಿಗೆದ್ದು ಈಕೆಗೆ ಬಹಿಷ್ಕಾರ ಘೋಷಿಸಿದ್ದರು. ಆ ವಿವಾದಕ್ಕೆ ಕ್ಯಾರೇ ಅನ್ನದ ಗಟ್ಟಿಗಿತ್ತಿ ಈಕೆ. ಆದರೆ ಈಗ ಟ್ವಿಟ್ಟರ್‌ನಿಂದಲೇ ಮಾಯವಾಗಿರುವುದು ಎಲ್ಲೆಡೆ ಕುತೂಹಲ ಕೆರಳಿಸಿದೆ. ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65